ಪಿ.ಡಬ್ಲ್ಯೂ-1

ದಿನಾಂಕ 04-01-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಎದುರುದಾರನ ಪರ ಶ್ರೀ ವಿ ಎಸ ಎಚ ವಕೀಲರಿಂದಃ-**

ನನ್ನ ಮತ್ತು ಎದುರುದಾರನ ಮದುವೆಯಾದ ನಂತರ ನಾವು ಕೇವಲ 05-06 ವರ್ಷಗಳು ಮಾತ್ರ ಚೆನ್ನಾಗಿದ್ದೇವು ಎಂದರೆ ಸರಿಯಲ್ಲ. ಸುಮಾರು 10 ವರ್ಷಗಳ ವರೆಗೆ ನಾವು ಚೆನ್ನಾಗಿ ಬಾಳ್ವೆ ಮಾಡುತ್ತಿದ್ದೆವು. ನಾನು ಯಾವುದೇ ಸಕಾರಣಗಳು ಇಲ್ಲದೇ ಎದುರುದಾರನಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ಬೆಳ್ಳಿ ಮತ್ತು ಬಂಗಾರ ಬೇಕೆಂದು ಪ್ರತಿದಿನವೂ ನನ್ನ ಗಂಡನಿಗೆ ತೊಂದರೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಬೇರೆಯವರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದು, ನನ್ನ ಗಂಡ ಸ್ವತಃ ಮತ್ತು ಹಿರಿಯರ ಮೂಲಕ ನನಗೆ ಬುದ್ದಿವಾದ ಹೇಳಿದ್ದರು ಸಹ ನಾನು ಅದನ್ನು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅತ್ತೆ ಮತ್ತು ಗಂಡನಿಗೆ ಸರಿಯಾಗಿ ಅಡುಗೆ ಮಾಡಿ ಹಾಕುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ನಾನು ಹಿಂಸೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಯಾರಿಗೂ ಹೇಳದೆ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ವಿವಾಹ ವಿಚ್ಛೇದನ ಕೋರಿ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಮುಂದುವರೆದು ಸದರಿ ಅರ್ಜಿ ನಿಖಾಲೆಯಾಗಿರುತ್ತದೆ ಎಂದು ಹೇಳುತ್ತಾರೆ.

ನನ್ನ ಗಂಡ ಒಕ್ಕಲುತನ ಮಾಡುತ್ತಾರೆ ಎಂದರೆ ಸರಿ. ಆತನಿಗೆ ವರ್ಷಕ್ಕೆ 10 ರಿಂದ 15 ಲಕ್ಷ ಆದಾಯ ಇರುತ್ತದೆ ಎಂದರೆ ಸರಿಯಲ್ಲ. ಆತನಿಗೆ 12 ಎಕರೆ ಜಮೀನಿದ್ದು ಟ್ರ್ಯಾಕ್ಟರ ನ್ನು ಬಾಡಿಗೆಗೆ ಕೊಟ್ಟಿರುತ್ತಾರೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡನಿಗೆ ಬರುತ್ತಿರುವ 10-15 ಲಕ್ಷ ಆದಾಯದಲ್ಲಿ ತನ್ನ, ತನ್ನ ತಂದೆ ತಾಯಿಯ ಮತ್ತು ಇಬ್ಬರು ಮಕ್ಕಳ ಖರ್ಚನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಇಬ್ಬರು ಮಕ್ಕಳಲ್ಲಿ ಒಬ್ಬ ಮಗ ನನ್ನ ಜೊತೆಯೇ ಇರುತ್ತಾರೆ. ನನ್ನ ಒಬ್ಬ ಗಂಡು ಮತ್ತು ಒಬ್ಬ ಹೆಣ್ಣುಮಗಳು ನನ್ನ ಗಂಡನ ಜೊತೆಯೇ ಇದ್ದು ಅವರ ಶಿಕ್ಷಣ ಮತ್ತು ಇತರ ಖರ್ಚನ್ನು ಎದುರುದಾರನೇ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಟೇಲರಿಂಗ ಕೆಲಸ ಮಾಡುತ್ತಿದ್ದು ಅದರಿಂದ ದಿನಕ್ಕೆ ರೂ. 500/- ರಿಂದ 1000/- ಆದಾಯ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಜೊತೆ ಒಕ್ಕಲುತನ ಮಾಡಲು ಹೋಗುತ್ತಿದ್ದು ಅದರಿಂದ ವರ್ಷಕ್ಕೆ 5-6 ಲಕ್ಷ ಆದಾಯ ಇದ್ದು ಜೀವನ ನಡೆಸಲು ಆಗುತ್ತದೆ ಎಂದರೆ ಸರಿಯಲ್ಲ. ಎದುರುದಾರನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.